**24**

# ಸಭೆಯ ವಿಸ್ತರಣೆ

## ಯುದಾಯ ಮತ್ತು ಸಮಾರ್ಯದಲ್ಲೆಲ್ಲಾ ಹಾಗೂ ಅನ್ಯಜನಾಂಗದವರ ಪರಿವರ್ತನೆಗೆ

## ಕ್ರಿ.ಶ. 35-45 (ಅಪೊಸ್ತಲರ ಕೃತ್ಯಗಳು 8-12)

**1. ಸಮಾರ್ಯಕ್ಕೆ ವಿಸ್ತರಣೆ** (8:1-25).-"ಯೆರೂಸಲೇಮಿನಿಂದ ಪ್ರಾರಂಭಿಸಿ" (ಲೂಕ 24:47) ಎಂಬುದು ನೆರವೇರಿತು. ಕೊನೆಯ ಆಜ್ಞೆಯಲ್ಲಿ ಸೂಚಿಸಿದ ವಿವಿಧ ಭೌಗೋಳಿಕ ಸ್ಥಳಗಳಿಗೆ ಹೋಗುವ ಸಮಯ ಬಂದಿತ್ತು (ಅಪೊಸ್ತಲರ ಕೃತ್ಯಗಳು 1:8). ಆದರೆ ಜನರ ಕೋಪದಿಂದ ಒತ್ತಾಯಿಸಲ್ಪಡುವವರೆಗೆ ಯಾವ ಚಲನೆಯೂ ಇರಲಿಲ್ಲ; ಮಾನವ ಯೋಜನೆಗಳು ದೈವಿಕವಾದವುಗಳೊಂದಿಗೆ ಸಮ್ಮಿಳಿತವಾಗುವುದಕ್ಕೆ ಇನ್ನೊಂದು ಉದಾಹರಣೆ. ಸ್ತೆಫನನ ಮರಣವು ಅವನನ್ನು ಕೊಲೆಮಾಡುವುದರ ಬಾಯಾರಿಕೆಯು ತೃಪ್ತಿಗೊಳ್ಳಲಿಲ್ಲ. ಅದು ಹುಲಿಗೆ ರಕ್ತದ ರುಚಿಯಂತೆ ಮಾತ್ರವೇ ಇತ್ತು. ಮೊದಲಿನ ಹಿಂಸೆಗಳು ಕಠಿಣವಾದವುಗಳಾಗಿರಲಿಲ್ಲ. ಈಗ ಫರಿಸಾಯರು ಮತ್ತು ಸದ್ದುಕಾಯರು, ಯಾಜಕರು ಹಾಗೂ ಜನರು ಬಾಲ್ಯ ಸಭೆಯ ಮೇಲೆ ತಿರುಗಿಬಿದ್ದರು. ಪರಿಣಾಮವು ಸುವಾರ್ತೆಯ ಬೆಂಕಿಗಳನ್ನು ನಂದಿಸಲಿಲ್ಲ, ಆದರೆ ನೂತನ ಕೇಂದ್ರಗಳಲ್ಲಿ ಅವುಗ ಳನ್ನು ಉರಿಯುವಂತೆ - ಮಾಡುವುದಾಯಿತು. ಅಪೊಸ್ತಲರು ಮಾತ್ರವೇ ಯೆರೂಸಲೇ ಮಿನಲ್ಲಿ ಉಳಿದುಕೊಂಡರು. ಚದರಿಹೋದ ಶಿಷ್ಯರು ಅನೇಕ ಸುವಾರ್ತಿಕರಾದರು, ಯೂದಾಯದಲ್ಲಿಯೂ ಸಮಾರ್ಯದಲ್ಲಿಯೂ ಪ್ರಸಂಗಿಸುವವರಾದರು. ಒಬ್ಬನ ಸೇವೆಯು ಮಾತ್ರವೇ ಹೇಳಲ್ಪಟ್ಟಿದೆ. ಏಳು ಜನ ಡೀಕನರಲ್ಲಿ ಒಬ್ಬನಾದ ಫಿಲಿಪ್ಪನು, ಸಮಾರ್ಯಕ್ಕೆ ಸುವಾರ್ತೆಯನ್ನು ತೆಗೆದುಕೊಂಡು ಹೋದನು. ಆರು ನೂರು ವರ್ಷಗಳ ವರೆಗೆ ಸಮಾರ್ಯರು ಒಂದು ಪ್ರತ್ಯೇಕವಾದ ಜನಾಂಗವಾಗಿ ಕಾಪಾಡಲ್ಪಟ್ಟಿತ್ತು, ಅದರಲ್ಲಿ ದೇವರ ನಡಿಸುವಿಕೆಯಿತ್ತು. ಅವರು ಯೆಹೂದ್ಯರಾಗಲೀ ಇಲ್ಲವೇ ಅನ್ಯರಾ ಗಲೀ ಆಗಿರಲಿಲ್ಲ. ಆದರೆ ಒಬ್ಬರಿಂದೊಬ್ಬರಿಗೆ ಮಧ್ಯ ಮಾರ್ಗದ ಮನೆಯಂತಿದ್ದರು, ಹೆಚ್ಚಿನ ಮಟ್ಟಗೆ ಪಂಚಾಶತ್ತಮ ದಿನದ ಅದ್ಭುತಕರವಾದ ಪ್ರದರ್ಶನಗಳಿಗೆ ತಕ್ಕಂತೆ ಫಿಲಿಪ್ಪನ ಕಾರ್ಯವಾಯಿತು[1]; ಹೆಸರಿಲ್ಲದ ಒಬ್ಬ ಮಹಿಳೆ ಮತ್ತು ಆಕೆಯ ಪಟ್ಟಣದ ಅನೇಕರು ಯೇಸುವಿನಲ್ಲಿ ನಂಬಿಕೆಯಿಟ್ಟು ಕ್ಷೇತ್ರದಲ್ಲಿ, ಈಗ ಜನರ ಗುಂಪುಗಳು ಯೇಸುವಿನ ಒಬ್ಬ ಶಿಷ್ಯನಿಂದ ಸಾರಲ್ಪಟ್ಟ ಸಂಪೂರ್ಣ ಸುವಾರ್ತೆಯನ್ನು ಸಂತೋಷ ದಿಂದ ಸ್ವೀಕರಿಸಿದವು, ಸುಪ್ರಸಿದ್ಧ ಮಂತ್ರವಾದಿಯಾಗಿದ್ದ ಸೀಮೋನನು ಮಾರ್ಪಾಟು ಹೊಂದಿದವರಲ್ಲಿ ಒಬ್ಬನಾಗಿದ್ದನು. ಫಿಲಪ್ಪನು ಸುವಾರ್ತೆಯನ್ನು ಸಾರಿದನು ಮತ್ತು ಅದ್ಭುತಗಳನ್ನು ಮಾಡುವವನಾಗಿದ್ದನು, ಅದರೆ ಆತ್ಮನ ವರಗಳನ್ನು ಇತರರ ಮೇಲೆ ಪಾರಲೌಕಿಕ ಸ್ವಾಸ್ಥ್ಯವಾಗಿ ಕೊಡಲಾರದವನಾಗಿದ್ದನು. ಆ ಶಕ್ತಿಯು ಅಪೊಸ್ತಲರಿಗೆ ಮಾತ್ರವೇ ಒಳಪಟ್ಟಿತ್ತು. ಸಮಾರ್ಯದವರಿಗೆ ಸುವಾರ್ತೆಯನ್ನು ಸಾರಿದ ಹೊಸ ಮಾರ್ಗವು ಅಪೊಸ್ತಲರು ಒಂದು ಸಂದರ್ಶನ ಕೊಡುವುದಕ್ಕೆ ಸಾಕಷ್ಟು ಮಹತ್ವದ್ದಾಗಿತ್ತು.

ಪೇತ್ರ ಮತ್ತು ಯೋಹಾನರು ಹೋಗಿ, ಕಾರ್ಯದೊಂದಿಗೆ ತೃಪ್ತರಾದಂತೆ ಕಾಣುತ್ತದೆ, ಮತ್ತು ಮಾರ್ಪಾಟ ಹೊಂದಿದವರು ಆತ್ಮನನ್ನು ಹೊಂದಿಕೊಳ್ಳುವಂತೆ ಅವರ ಮೇಲೆ ಕೈಗಳನ್ನಿಟ್ಟರು. ಬಲಕ್ಕಾಗಿ ಮಂತ್ರವಾದಿ ಸೀಮೋನನ ಹಳೇ ಅಪೇಕ್ಷೆಯು ಹಿಂದಿರುಗಿ ಬಂದಿತು, ಮತ್ತು ಪರಿಶುದ್ಧಾತ್ಮ ಶಕ್ತಿಯನ್ನು ತನಗೆ ಕೊಡುವುದಕ್ಕಾಗಿ ಪೇತ್ರನಿಗೆ ಹಣಕೊಡಲು ಬಂದನು ಮತ್ತು ಪಾಪಗಳಿಗಾಗಿ ಅಪೊಸ್ತಲನ ತೀವ್ರವಾದ ಗದರಿಕೆಯನ್ನು ಹೊಂಡುಕೊಂಡನು. ಈ ದಿನದ ವರೆಗೆ ಸಭೆಯ ಹುದ್ದೆಗಳನ್ನು ಕೊಂಡುಕೊಳ್ಳುವುದು ಸೀಮೋನ್ ಎಂದು ಸೀಮೋನಿ ಹೆಸರಿನಿಂದ ಕರೆಯಲ್ಪಡುತ್ತದೆ.

**2. ಕಂಚುಕಿಯು ಮಾರ್ಪಾಟು ಹೊಂದಿದ್ದು** (8:26-40).-ಐತಿಯೋಪ್ಯದ ರಾಣಿ ಕಂದಾಕೆಯ ಖಜಾಂಚಿಯು ಯೆರೂಸಲೇಮಿಗೆ ಒಂದು ಧಾರ್ಮಿಕ ಪ್ರಯಾಣದಿಂದ ಹಿಂದಿರುಗಿ ತನ್ನ ಮನೆಗೆ ಹೋಗುವ ಮಾರ್ಗದಲ್ಲಿದ್ದನು. ಫಿಲಿಪ್ಪನು ಗಾಜಾದ ಮಾರ್ಗದ ಕಡೆಗೆ ದೇವರಿಂದ ಕಳುಹಿಸಲ್ಪಟ್ಟನು, ಅವರು ಮಾರ್ಗದಲ್ಲಿ ಭೇಟಿಯಾದರು. ಅಧಿಕಾರಿಯು ಪ್ರವಾದಿ ಯೆಶಾಯನಿಂದ ಓದುತ್ತಿದ್ದನು. ಫಿಲಿಪ್ಪನು ತನ್ನೊಂದಿಗೆ ಬಂದು ಪ್ರವಾದನೆಯನ್ನು ವಿವರಿಸಬೇಕೆಂದು ಆಮಂತ್ರಿಸಿದನು. ಫಿಲಿಪ್ಪನು ಅವನಿಗೆ ಯೇಸುವನ್ನು ಪ್ರಸಂಗಿಸಿದನು. ಅದರ ಪರಿಣಾಮವಾಗಿ ಕಂಚುಕಿಯು ಬಾಪ್ತಿಸ್ಮಕ್ಕಾಗಿ ಕೇಳಿಕೊಂಡನು. ರಥವು ನಿಲ್ಲಿಸಲ್ಪಟ್ಟಿತು, ಇಬ್ಬರೂ ಬೀದಿಯ ಪಕ್ಕದ ಕೊಳದೊಳಗೆ ಇಳಿದರು, ಮತ್ತು ಫಿಲಿಪ್ಪನು ಮಾರ್ಪಾಟ ಹೊಂದಿದವನಿಗೆ ಬಾಪ್ತಿಸ್ಮ ಮಾಡಿದನು. ಅವನು ತಾನು ಕಂಡುಕೊಂಡ ನೂತನ ವಿಶ್ವಾಸದಲ್ಲಿ ಆನಂದಿಸುತ್ತ ಹೊರಟು ಹೋದನು. ಅವನು ಅನ್ಯನಾಗಿರುವ ಸಾಧ್ಯತೆಯಿರುತ್ತದೆ. ಹಾಗಿದ್ದರೆ, ಇದು ಅನ್ಯಜಗತ್ತಿಗೆ ಒಂದು ವೈಯಕ್ತಿಕ ಬದಲಾವಣೆಯಾಗಿರುತ್ತದೆ ಮತ್ತು ಯೆರೂಸಲೇಮಿನಲ್ಲಿ ಯಾವುದೇ ಗಮನವನ್ನು ಸೆಳೆಯಲಿಲ್ಲ. ಯಾಕಂದರೆ ಇದು ಜನರ ವಾಸವಿಲ್ಲದ ಸ್ಥಳದಲ್ಲಿ ನಡೆಯಿತು, ಯಾವ ಸಮಾಜಿಕ ಸಂಬಂಧಗಳನ್ನು ಒಳಗೊಂಡಿರಲಿಲ್ಲ ಹಾಗೂ ಆ ಸಮಯದಲ್ಲಿ ಯೆರೂಸಲೇಮಿನಲ್ಲಿ ಯಾರಿಗೂ ತಿಳಿಯಲ್ಪಟ್ಟಿರಲಿಲ್ಲ. ಬಹುಶಃ ಅವನು ಗ್ರೇಸಿಯನ್ ಯೆಹೂದ್ಯನಾಗಿದ್ದಿರಬೇಕು, ಅವರಲ್ಲಿ ಅನೇಕರು ನೆಹೆಮೀಯನಂತೆ, ಅನ್ಯ ದೇಶಗಳಲ್ಲಿ ದೊಡ್ಡ ಹುದ್ದೆಗಳಲ್ಲಿದ್ದರು. ಫಿಲಿಪ್ಪನು ಕೈಸರಯಕ್ಕೆ ಹೋದನು, ಅಲ್ಲಿ ನಾವು ಅವನನ್ನು ಅನೇಕ ವರ್ಷಗಳ ನಂತರ ಪುನಃ ಸಂದರ್ಶಿಸುವೆವು.

**3. ಸೌಲನ ಮಾರ್ಪಡುವಿಕೆ ಮತ್ತು ಮೊದಲಿನ ಕಾರ್ಯಗಳು** (9:1-30).-ಸೌಲನ ಮಾರ್ಪಡುವಿಕೆಯು ಪಂಚಾಶತ್ತಮದ ನಂತರದ ಕ್ರೈಸ್ತತ್ವದ ಚರಿತ್ರೆಯಲ್ಲಿ ಅತ್ಯಂತ ಪ್ರಮುಖವಾದ ಘಟನೆಯಾಗಿದೆ. ಈ ವಿಷಯವು ನಮಗೆ ಮೂರು ಸಲ ಹೇಳಲ್ಪಟ್ಟಿದೆ: ಲೂಕನಿಂದ (ಅಪೊಸ್ತಲರ ಕೃತ್ಯಗಳು 9), ಯೆಹೂದ್ಯರ ಜನಸಮೂಹಕ್ಕೆ ಪೌಲನಿಂದ (ಅಪೊಸ್ತಲರ ಕೃತ್ಯಗಳು 22), ಮತ್ತು ಅಗ್ರಿಪ್ಪನ ಮುಂದೆ ಪುನಃ ಪೌಲನಿಂದ (ಅಪೊಸ್ತಲರ ಕೃತ್ಯಗಳು 26). ಬೇರೆ ಯಾವುದೇ ಅಪೊಸ್ತಲನಿಂದ ಹೆಚ್ಚಾಗಿ ಪೌಲನು ಆದಿ ಸಭೆಯ ಮೇಲೆ ತನ್ನ ಪ್ರಭಾವಬೀರಿದ್ದಾನೆ. ಲೂಕನ ಸುವಾರ್ತೆ ಮತ್ತು ಅಪೊಸ್ತಲರ ಕೃತ್ಯಗಳನ್ನೊಳಗೊಂಡು - ಎರಡೂ ಬಹುಶಃ ಪೌಲನ ಪ್ರೇರಣೆಯ ಮತ್ತು ನಿದರ್ಶನದಲ್ಲಿ ರಚಿಸಲ್ಪಟ್ಟಿದ್ದು - ಹೊಸ ಒಡಂಬಡಿಕೆಯ ಅರ್ಧಕ್ಕಿಂತಲೂ ಹೆಚ್ಚಿನ ಭಾಗವು ಪೌಲನ ಮೂಲದ್ದಾಗಿರುವುದು.

ಮೂರನೆಯ ಹಿಂಸೆಯು ಪ್ರಾರಂಭವಾದಾಗ ಪೌಲನನ್ನು ನಾವು ಯೆರೂಸಲೇಮಿನಲ್ಲಿ ಬಿಟ್ಟೆವು. ಅವನು ಅದರ ಮೂಲವಾಗಿದ್ದನು. ಅವನು ಮಾಡಿದ್ದೆಲ್ಲವನ್ನೂ ಅವನು ತನ್ನ ಬಲದಿಂದ ಮಾಡಿದನು. ಸುವಾರ್ತೆಯನ್ನು ಇತರ ಕೇಂದ್ರಗಳಿಗೆ ಕಳುಹಿಸಲು ಸಹಾಯ ವಾಗುತ್ತಿರುವ ವರೆಗೆ ದೇವರು ಅವನು ಕೆಲಸಮಾಡುವಂತೆ ಬಿಟ್ಟನು; ಆದರೆ ಅವನು

ಭಯಂಕರವಾದ ಅಸಹನೆಯನ್ನು ದೂರದ ದಮಸ್ಕಕ್ಕೆ ಒಯ್ಯಲು ನೋಡಿದಾಗ, ದೇವರು ಅವನ ಮೇಲೆ ತನ್ನ ಕೈಗಳನ್ನು ಹಾಕಿದನು. ಅವನನ್ನು ಒಬ್ಬ ಸೇವಕನನ್ನಾಗಿಯೂ ಮತ್ತು ಒಬ್ಬ ಸಾಕ್ಷಿಯನ್ನಾಗಿಯೂ ಅಂದರೆ ಒಬ್ಬ ಅಪೊಸ್ತಲನನ್ನಾಗಿ ಮಾಡಲು ಯೇಸುವು ಅವನಿಗೆ ಕಾಣಿಸಿಕೊಂಡನು (ಅಪೊಸ್ತಲರ ಕೃತ್ಯಗಳು 26:16); ಅವನು ಕುರುಡನಾಗಿ, ದಮಸ್ಕಕ್ಕೆ ಕಳುಹಿಸಲ್ಪಟ್ಟನು, ಅಲ್ಲಿ ಮೂರು ದಿನಗಳ ಉಪವಾಸ, ಪ್ರಾರ್ಥನೆಯ ನಂತರ ಅನನಿಯ ಎಂಬ ಹೆಸರಿನ ಒಬ್ಬ ಶಿಷ್ಯನಿಂದ ಬೋಧನೆ ಹೊಂದಿದನು ಮತ್ತು ಬಾಪ್ತಿಸ್ಮ ಹೊಂದಿದನು. ಗಲಾತ್ಯ ಮೊದಲನೆಯ ಅಧ್ಯಾಯದಲ್ಲಿಯ ವೃತ್ತಾಂತವನ್ನು ಅಪೊಸ್ತಲರ ಕೃತ್ಯ ಒಂಭತ್ತರಲ್ಲಿಯ ವೃತ್ತಾಂತದೊಂದಿಗೆ ಕೂಡಿಸಿ, ಅವನು ಕೂಡಲೇ ದಮಸ್ಕದಲ್ಲಿ ಪ್ರಸಂಗಿಸಲು ಪ್ರಾರಂಭಿಸಿದನೆಂದು ನಾವು ಕಲಿತುಕೊಳ್ಳುತ್ತೇವೆ; ಮೂರು ವರ್ಷಗಳ ಕಾಲ ಅರೇಬಿಯಕ್ಕೆ ಹೋದನು; ದಮಸ್ಕಕ್ಕೆ ಹಿಂದಿರುಗಿದನು ಅವನು ಮೊದಲು ಎಬ್ಬಿಸಿದ ಹಿಂಸೆಯಂಥದ್ದನ್ನು ಈಗ ತಾನೇ ಎದುರಿಸಬೇಕಾಯಿತು; ಯೆರೂಸಲೇಮಿಗೆ ತಪ್ಪಿಸಿಕೊಂಡು ಹೋದನು, ಅಲ್ಲಿ ಅವನನ್ನು ನಂಬದೇ ಹೋದ ಶಿಷ್ಯರಿಗೆ ಬಾರ್ನಬನಿಂದ ಪರಿಚಯಿಸಲ್ಪಟ್ಟನು; ಯೆಹೂದ್ಯರ ಒಳಸಂಚಿನವರೆಗೆ ಹಾಗೂ ದೇವರಿಂದ ಒಂದು ದರ್ಶನ ಹೊಂದುವವರೆಗೆ ಅವನು ಯೆರೂಸಲೇಮಿನಲ್ಲಿ ಧೈರ್ಯದಿಂದ ಪ್ರಸಂಗಿಸಿದನು (ಅಪೊಸ್ತಲರ ಕೃತ್ಯಗಳು 22:17-21) ಅವನ ಸ್ವಂತ ಊರಾದ ತಾರ್ಸಕ್ಕೆ ಕಳುಹಿಸಲ್ಪಟ್ಟನು. ಅವನು ಪೌಲನಾಗಿದ್ದಲ್ಲಿ ಅವನು ಒಬ್ಬ ಕೆಲಸದವನಾಗಿದ್ದನು; ಆದರೆ ಕೆಲವು ವರ್ಷಗಳ ವರೆಗೆ ಅವನ ಕಾರ್ಯಗಳ ಮೇಲೆ ಸಂಶಯದ ತೆರೆ ಮುಸುಕಿತ್ತು.

**4. ಅನ್ಯ ಜನಾಂಗದವರ ಕಡೆಗೆ ಬದಲಾವಣೆ.**-A. ಪೇತ್ರನ ಮುಖಾಂತರ; ಕೊರ್ನೇಲ್ಯನ ಮಾರ್ಪಡುವಿಕೆ (10).-ನಮ್ಮ ಕಥೆಯಲ್ಲಿ ಈಗ ಒಂದು ಹೊಸ ತಿರುವಿಗೆ ಬರುತ್ತೇವೆ. ಸಭೆಯು ತನ್ನ ಶೈಶವಾವಸ್ಥೆಯ ಸುತ್ತಿದ ಯೆಹೂದಿ ಸುತ್ತುಗಳನ್ನು ತೆಗೆದು ಹಾಕಬೇಕಾಗಿತ್ತು. ಯೆಹೂದ್ಯರ ಮತ್ತು ಅನ್ಯರ ಮಧ್ಯದಲ್ಲಿಯ ಡೊಂಗರು ಯೆಹೂದ್ಯರ ಮತ್ತು ಸಮಾರ್ಯರ ಮಧ್ಯದಲ್ಲಿಯದಕ್ಕಿಂತ ಹೆಚ್ಚು ವಿಶಾಲವಾದದ್ದೂ ಆಳವಾದದ್ದೂ ಆಗಿತ್ತು. ಆದರೆ ಅದು ಕೂಡಿಸಲ್ಪಟ್ಟಿತು ಒಬ್ಬರೊಬ್ಬರಿಗಾಗಿ ಮತ್ತು ಘಟನೆಗಾಗಿ ಹೃದಯಗಳನ್ನು ಮೌನವಾಗಿ ಸಿದ್ಧ ಪಡಿಸುವುದರಿಂದ ದೊಡ್ಡ ಯುಗಾರಂಭಕ್ಕಾಗಿ ದೇವರು ಸಾಮಾನ್ಯವಾಗಿ ಸಿದ್ಧತೆ ಮಾಡುತ್ತಾನೆ. ಅದು ಇಲ್ಲಿ ಹಾಗಾಯಿತು.

*a. ಕೊರ್ನೇಲ್ಯನ ಸಿದ್ಧತೆ.*-ಪಲೆಸ್ತೀನ ರಾಜಕೀಯ ರಾಜಧಾನಿ ಕೈಸರಯದಲ್ಲಿ, ಕೊರ್ನೇಲ್ಯನೆಂಬ ಹೆಸರಿನ ಒಬ್ಬ ರೋಮನ್ ಶತಾಧಿಪತಿಯು ನೇಮಿಸಲ್ಪಟ್ಟಿದ್ದನು, ಸುನ್ನತಿಯಿಲ್ಲದ ಅನ್ಯನಾಗಿದ್ದರೂ, ಅವನು ದೇವರಲ್ಲಿ ನಂಬಿಕೆಯುಳ್ಳವನಾಗಿದ್ದನು; ಭಕ್ತಿವಂತನೂ ನೀತಿವಂತನೂ, ದಾನಧರ್ಮ ಮಾಡುವವನೂ ಆಗಿದ್ದನು. ರಕ್ಷಣೆಯ ಮಾರ್ಗದಲ್ಲಿ ಅವನಿಗೆ ಬೋಧನೆ ಮಾಡಲು, ಯೊಪ್ಪದಲ್ಲಿದ್ದ ಸೀಮೋನ ಪೇತ್ರನನ್ನು ಕರೆಕಳುಹಿಸಬೇಕೆಂದು ದೇವರು ಒಂದು ದರ್ಶನದಲ್ಲಿ ಆದೇಶಿಸಿದನು.

*b. ಪೇತ್ರನ ಸಿದ್ಧತೆ.*-ಪೇತ್ರನು ಸಮಾರ್ಯದಿಂದ ಯೆರೂಸಲೇಮಿಗೆ ಹಿಂದಿರುಗಿದಲ್ಲಿ ನಾವು ಅವನನ್ನು ಬಿಟ್ಟೆವು. ಅನಂತರ ಅವನನ್ನು ಲುದ್ದದಲ್ಲಿ ಐನೇಯನನ್ನು ಗುಣಪಡಿಸುವದರಲ್ಲಿ ಕಂಡುಕೊಳ್ಳುತ್ತೇವೆ. ಅಲ್ಲಿಂದ ದೊರ್ಕಳ ಮರಣದ ನಿಮಿತ್ತವಾಗಿ ಅವನು ಯೊಪ್ಪಕ್ಕೆ ಕರೆಯಲ್ಪಟ್ಟನು. ಇಲ್ಲಿ ಅವನು ದೊರ್ಕಳನ್ನು ಜೀವಿಸುವಂತೆ ಮಾಡಿದನು; ಮತ್ತು ಇಲ್ಲಿ ಕೊರ್ನೇಲ್ಯನು ಕಳುಹಿಸಿದವರು ಅವನನ್ನು ಕಂಡುಕೊಂಡರು. ಆದರೆ ಪೇತ್ರನೂ ಸಹ ಘಟನೆಗೆ ಸಿದ್ಧಪಡಿಸಲ್ಪಡಬೇಕಾಗಿತ್ತು. ಪರಲೋಕದಿಂದಾದ ಒಂದು ದರ್ಶನವು ಯಾರನ್ನಾದರೂ ಸಾಮಾನ್ಯರು ಅಥವಾ ಅಶುದ್ಧರು ಎಂದು ಕರೆಯ

ಬಾರದೆಂದು ಅವನಿಗೆ ಕಲಿಸಿತು ಮತ್ತು ಕೊರ್ನೇಲ್ಯನ ಬಳಿಗೆ ಹೋಗಲು ಅವನಿಗೆ ಆತ್ಮನು ಅಪ್ಪಣೆಕೊಟ್ಟನು. ಕೊರ್ನೇಲ್ಯನು ತನ್ನ ಮನೆಯವರನ್ನೂ ಸ್ನೇಹಿತರನ್ನೂ ಕೂಡಿಸಿದ್ದನು. ಪೇತ್ರನು ಅವರಿಗೆ ಪ್ರಸಂಗಿಸಿದನು ಮತ್ತು ಬಾಪ್ತಿಸ್ಮದ ಮುಖಾಂತರ ಅವರನ್ನು ಸಭೆಯಲ್ಲಿ ಸ್ವೀಕರಿಸಿಕೊಂಡನು.

*c. ವಿಷಯವು ಪ್ರತಿಪಾದಿಸಲ್ಪಟ್ಟಿತು.*-ಯೆರೂಸಲೇಮಿನಲ್ಲಿಯ ಖಂಡಿತವಾಗಿ ಯೆಹೂದಿ ಕ್ರೈಸ್ತರಿಗೆ ಅದು ಚಕಿತಗೊಳಿಸುವ ಸಂಗತಿಯಾಗಿತ್ತು, ಸುನ್ನತಿಯಿಲ್ಲದ ಅನ್ಯ ಜನಾಂಗದ ಇಡೀ ಮನೆತನದೊಂದಿಗೆ ಧಾರ್ಮಿಕ ಹಾಗೂ ಸಾಮಾಜಿಕ ಸಂಬಂಧಗಳಲ್ಲಿ ಪ್ರವೇಶಿಸುವುದು ಸೌಜನ್ಯದ ಪ್ರತಿಯೊಂದು ನಿಯಮವನ್ನು ಉಲ್ಲಂಘಿಸುವದಾಗಿತ್ತು ಹಾಗೂ, ಪೇತ್ರನು ಯೆರೂಸಲೇಮಿಗೆ ಹಿಂದಿರುಗಿದ ಮೇಲೆ ಅದರ ಬಗ್ಗೆ ವಿವರಿಸಲು ಕರೆಯಲ್ಪಟ್ಟನು. ಆದರೆ ದೇವರು ಅವನಿಗೆ ಒಂದು ಉತ್ತರವನ್ನು ಒದಗಿಸಿಕೊಟ್ಟನು. ಸಾಮಾನ್ಯವಾದ ಕ್ರಯಕ್ಕೆ ವಿರುದ್ಧವಾಗಿ ಆತ್ಮನು, ತನ್ನ ಅಲೌಕಿಕ ನಿಧಿಗಳಲ್ಲಿ, ಕೊರ್ನೇಲ್ಯನ ಮನೆಯವರ ಮೇಲೆ, ಅವರನ್ನು ಸ್ವೀಕರಿಸುವದಕ್ಕಾಗಿ ದೈವಿಕ ಆಜ್ಞೆಯಂತೆ ಬಾಪ್ತಿಸ್ಮಕ್ಕಿಂತ ಮೊದಲು ಬಂದನು. ಅದು "ಅನ್ಯಜನಾಂಗದವರ ಪಂಚಾಶತ್ತಮವಾಗಿತ್ತು"; ದೇವರ ಮುದ್ರೆಯು ಹೊಸ ಹಾದಿಯಲ್ಲಿ ಬಂದಿತು, ಅದರಂತೆ ಸಭೆಯಿಂದ ಆನಂದದಿಂದ ಗುರುತಿಸಲ್ಪಟ್ಟಿತು.

B. ಗ್ರೀಕರ ಮುಖಾಂತರ (11:19-30).-ಈ ಘಟನೆಗಳು ಸಂಭವಿಸುತ್ತಿರುವಾಗ, ಅನ್ಯಜನಾಂಗದವರ ಜಗತ್ತಿನೊಳಗೆ ವಿಶಾಲವಾಗಿ ಹೋಗುವಂತೆ ದೇವರು ತನ್ನ ಸಭೆಯನ್ನು ಸಿದ್ಧಪಡಿಸುತ್ತಿದ್ದನು. ಪೌಲನ ಹಿಂಸೆಯಿಂದ ಚದರಿ ಹೋದವರು ಸುವಾರ್ತೆಯನ್ನು ಫೊಯಿನಿಕ್ಯದೊಳಗೆ, ಕುಪ್ರದ್ವೀಪದೊಳಗೆ ಮತ್ತು ಅಂತಿಯೋಕ್ಯ ಪಟ್ಟಣದೊಳಗೆ ಒಯ್ದರು. ಮೊದಲಿಗೆ ಯೆಹೂದ್ಯರಿಗೆ ಮಾತ್ರವೇ ಅವರು ಪ್ರಸಂಗಿಸಿದರು. ಆದರೆ ಬೇಗನೇ ಗ್ರೀಕರು ಎಲ್ಲಾ ಆತಂಕಗಳನ್ನು ಮುರಿದು ಅನ್ಯರಿಗೂ ಪ್ರಸಂಗಿಸುತ್ತಿರುವರು ಎಂಬ ಸುದ್ದಿಯು ಯೆರೂಸಲೇಮಿಗೆ ತಲುಪಿತು. ಕೂಡಲೇ ಅವರು ಗ್ರೀಕನಾಗಿದ್ದ ಬಾರ್ನಬನನ್ನು ಅಂತಿಯೋಕ್ಯಕ್ಕೆ ಕಳುಹಿಸಿದರು.

*a. ಒಬ್ಬ ನೂತನ ನಾಯಕ ಮತ್ತು ಒಂದು ನೂತನ ಕೇಂದ್ರ.*-ಬಾರ್ನಬನು ಈ ಕಾರ್ಯಕ್ಕೆ ತನ್ನ ಮನ್ನಣೆಯನ್ನು ಕೊಟ್ಟಿದ್ದಲ್ಲದೇ, ಸೌಲನಿಗಾಗಿ ತಾರ್ಸಕ್ಕೆ ಹೋದನು. ಯೆರೂಸಲೇಮಿನಲ್ಲಿಯ ಶಿಷ್ಯರಿಗೆ ಸೌಲನನ್ನು ಪರಿಚಯಿಸಿದವನು ಬಾರ್ನಬನು ಎಂಬುದನ್ನು ಜ್ಞಾಪಿಸಿಕೊಳ್ಳತಕ್ಕದ್ದು; ಅವನನ್ನು "ಪೌಲನನ್ನು ಮೂಲದಲ್ಲಿ ಕಂಡುಹಿಡಿದವನು" ಎಂದು ಕರೆಯಬಹುದು, ಕೊನೆಗೆ ಮನುಷ್ಯನಿಗಾಗಿ ಸ್ಥಳವು ಹಾಗೂ ಸ್ಥಳಕ್ಕಾಗಿ ಮನುಷ್ಯನು ಕಂಡುಕೊಳ್ಳಲ್ಪಟ್ಟವು. ಅಂತಿಯೋಕ್ಯವು ಏಶಿಯಾದಲ್ಲಿ ಜನಸಂಖ್ಯೆಯ ಮತ್ತು ಸಂಸ್ಕೃತಿಯ ಅತಿದೊಡ್ಡ ಕೇಂದ್ರವಾಗಿತ್ತು; ಪೌಲನು ಸಭೆಯಲ್ಲಿ ಅತಿವಿಶಾಲವಾದವನೂ, ಒತ್ತಡವುಳ್ಳ ಮನುಷ್ಯನೂ ಆಗಿದ್ದನು. ಅಂತಿಯೋಕ್ಯದಲ್ಲಿ ಪೌಲನು ತಲುಪಿದ ಕ್ಷಣದಿಂದ ಪೇತ್ರನು ಮತ್ತು ಯೆರೂಸಲೇಮ ಹಿನ್ನೆಲೆಯೊಳಗೆ ಬಿದ್ದರು; ಪೌಲ ಮತ್ತು ಅಂತಿಯೋಕ್ಯವು ಮುನ್ನೆಲೆಯೊಳಗೆ ಬಂದರು. ಒಂದು ನೂತನ ಕೇಂದ್ರ ಮತ್ತು ಒಬ್ಬ ನೂತನ ನಾಯಕ ಬೆಳೆಯಿಸಲ್ಪಟ್ಟರು. ಯೆರೂಸಲೇಮ ಮತ್ತು ಅಲ್ಲಿಯ ನಾಯಕರಿಗಿಂತ ಇವೆರಡು ವಿಶ್ವವ್ಯಾಪ್ತಿ ಸುವಾರ್ತಾ ಕಾರ್ಯಕ್ಕಾಗಿ ಹೆಚ್ಚು ಉತ್ತಮವಾಗಿ ಹೊಂದಿಕೊಂಡಿದ್ದವು.

*b. ಹೊಸ ಹೆಸರು.*- "ಅಂತಿಯೋಕ್ಯದಲ್ಲಿ ಮೊದಲು ಶಿಷ್ಯರು ಕ್ರೈಸ್ತರೆಂದು ಕರೆಯಲ್ಪಟ್ಟರು"[2] ಎಂದು ಅರ್ಥಗರ್ಭಿತವಾಗಿ ಹೇಳಲ್ಪಟ್ಟಿದೆ. ಹೆಸರು ಯೆರೂಸಲೇಮಿನಲ್ಲಿ ಉದಯವಾಗಿರಲಿಕ್ಕಿಲ್ಲ. ಅಲ್ಲಿ, ಶಿಷ್ಯರು ಎಲ್ಲರೂ ಯೆಹೂದ್ಯರಾಗಿದ್ದರು, ಇತರ

ಯೆಹೂದ್ಯರಿಂದ ಅನ್ಯರು ಭಿನ್ನವಾಗಿಕಂಡದ್ದು ಬಹಳ ಕ್ವಚಿತ. ಅಂತಿಯೋಕ್ಯದಲ್ಲಿ ಶಿಷ್ಯರ ಮಂಡಳಿಯು ಅನ್ಯಜನರಿಂದ ತೆಗೆದುಕೊಳ್ಳಲ್ಪಟ್ಟದ್ದಾಗಿತ್ತು. ಅವರು ಯೆಹೂದಿ ಮತ್ತು ಅನ್ಯಜನರಿಂದ ಅಮೂಲಾಗ್ರವಾಗಿ ಭಿನ್ನವಾಗಿದ್ದರು. ಹೆಸರು ಅಗತ್ಯವಾದದ್ದು ಯೋಗ್ಯವಾದದ್ದೂ ಆಗಿತ್ತು.

**5. ಯೆಹೂದ್ಯರಿಂದ ನಾಲ್ಕನೆಯ ಹಿಂಸೆ.**-ಪೌಲನ ಮಿಶನರಿ ಪ್ರಯಾಣಗಳನ್ನು ಅನುಸರಿಸುವ ಮೊದಲು ಲೂಕನು ನಮಗೆ ಯೆರೂಸಲೇಮಿನಲ್ಲಿಯ ವಿಷಯಗಳ ಇನ್ನೊಂದು ನೋಟವನ್ನು ಕೊಡುತ್ತಾನೆ. ಹೆರೋದ ಅಗ್ರಿಪ್ಪ I., ಹೆರೋದಿಯನ್ ಸಾಂಪ್ರದಾಯಗಳಿಗೆ ತಕ್ಕಂತೆ ರಕ್ತಪಾತದ ಹಿಂಸೆಯನ್ನು ಪ್ರಾರಂಭಿಸಿದನು. ಇವನು ಬೇತ್ಲೆಹೇಮಿನ ಶಿಶುಗಳನ್ನು ಕೊಲೆಮಾಡಿಸಿದ ಹೆರೋದನ ಮೊಮ್ಮಗನು ಮತ್ತು ಸ್ನಾನಿಕನಾದ ಯೋಹಾನನ ತಲೆಯನ್ನು ಹೊಯ್ಯಿಸಿದ ಹೆರೋದನ ಚಿಕ್ಕಪ್ಪನ ಮಗನು. ಅಪೊಸ್ತಲ ಯಾಕೋಬನು ಶ್ರಮೆಯ ತನ್ನ ಬಾಪ್ತಿಸ್ಮದಲ್ಲಿ ಹತಸಾಕ್ಷಿಯಾದನು (ಮತ್ತಾಯ 20:22). ಪೇತ್ರನು ಅದೇ ಗತಿಯಲ್ಲಿ ಸೆರೆಮನೆಯಲ್ಲಿ ಕಾದುಕೊಂಡಿದ್ದನು, ಆಗ ಸಭೆಯ ಪ್ರಾರ್ಥನೆಯ ಮುಖಾಂತರ ಮತ್ತು ದೇವರ ದೂತನ ನಡಿಸುವಿಕೆಯಿಂದ, ಅವನು ಬಿಡುಗಡೆಹೊಂದಿದನು ಮತ್ತು ಅನೇಕ ವರ್ಷಗಳ ಸೇವೆಗಾಗಿ ರಕ್ಷಿಸಲ್ಪಟ್ಟನು. ಹೆರೋದನು ಅಸಹ್ಯವಾದ ರೋಗದಿಂದ ಸತ್ತು ಹೋದನು (ಕ್ರಿ.ಶ. 44); "ಆದರೆ ದೇವರ ವಾಕ್ಯವು ಹಬ್ಬಿ ಹೆಚ್ಚುತ್ತಾ ಬಂದಿತು."[3]

---

ಟಿಪ್ಪಣಿಗಳು

[1]ಅಪೊಸ್ತಲರ ಕೃತ್ಯಗಳು 2ರಲ್ಲಿ ಪಂಚಾಶತ್ತಮ ದಿನದಂದು ಸಂಭವಿಸಿದ ಅದ್ಭುತಗಳನ್ನು ಪುನರಾವಲೋಕನ ಮಾಡಿರಿ. [2]ಅಪೊಸ್ತಲರ ಕೃತ್ಯಗಳು 11:26. [3]ಅಪೊಸ್ತಲರ ಕೃತ್ಯಗಳು 12:24.

© 2009 Truth for Today